# ಒಂದು ಕಾಗದದ ಚೂರು ಮತ್ತು ವಿವೇಕಾನಂದ ಜನ್ಮಶತಾಬ್ದಿ

## (ಒಂದು ಹಳೆಯ ನೆನಪು)

ಲಕ್ಷ್ಮೀನಾರಾಯಣ ಅಡೇಖಂಡಿ

ಭಾಗ ೧

ಬಾಲ್ಯದಲ್ಲಿ ಪಡೆದ ಒಂದು ಪ್ರೇರಣೆ ಜೀವನದುದ್ದಕ್ಕೂ ಪರಿಣಾಮ ಬೀರಿ, ಬಾಳಿನ ಗತಿಯನ್ನೇ ಬದಲಾಯಿಸುವುದಿದೆ. ಅಂಥ ಒಂದು ಘಟನೆಯನ್ನು ಇಲ್ಲಿ ವಿವರಿಸಲಾಗಿದೆ. ಲೇಖಕರು ಮೂಲತಃ ಕೊಪ್ಪ ತಾಲ್ಲೂಕಿನ ಬಳಿ ಒಂದು ಹಳ್ಳಿಯವರು; ವಿದ್ಯಾಭ್ಯಾಸ - ವೃತ್ತಿಗಾಗಿ ಬೆಂಗಳೂರಿಗೆ ಬಂದು ನೆಲೆಸಿದವರು. ಕಥೆ, ಕಾದಂಬರಿ,ಕವನ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ದುಡಿದ ಹಲವು ಪ್ರಕಟಣೆಗಳನ್ನು ಹೊರತಂದಿದ್ದಾರೆ. ಕೊಪ್ಪ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ಪಡೆದ ಅವರು, ಚಿಕ್ಕಮಗಳೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿದ್ದಾರೆ.



ಕೆಲವೊಮ್ಮೆ ಯಾರೋ ಒಬ್ಬರು, ಯಾವುದೋ ಸನ್ನಿವೇಶದಲ್ಲಿ ಹೇಳಿದ ಒಂದು ಮಾತು ನಮ್ಮ ಬದುಕಿನ ಅನೂಹ್ಯ ತಿರುವಿಗೆ ಹೇಗೆ ಕಾರಣವಾಗುತ್ತದೆ ಎಂದು ನೆನಪಿಸಿಕೊಂಡರೆ ಆಶ್ಚರ್ಯವಾಗುತ್ತದೆ. ಕಳೆದ ಬಾರಿ ಶೃಂಗೇರಿಗೆ ಹೋದ ಸಂದರ್ಭದಲ್ಲಿ, ನಾನು ಓದಿದ ತಾಲ್ಲೂಕ್ ಬೋರ್ಡ್ ಹೈಸ್ಕೂಲ್ ಮುಂದೆ ಪ್ರಯಾಣಿಸಿದಾಗ ಯಾಕೋ ಇದು ಮನಸ್ಸಿಗೆ ಬಂತು. ನನಗೆ ಕಾವ್ಯ, ಕಥೆ, ಕಾದಂಬರಿ ಇವುಗಳನ್ನು ಓದುವುದರಲ್ಲಿ - ಒಟ್ಟಿನಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ - ಅತೀವ ಆಸಕ್ತಿ ಇದ್ದರೂ ಶಾಲೆಯ ಓದಿನಲ್ಲಿ ಬಾಲ್ಯದಲ್ಲಿ ನಿರ್ಲಕ್ಷ್ಯ, ನಿರಾಸಕ್ತಿ. ಹೀಗಾಗಿ ನನ್ನ ಓದು ಊರಿನ ಏಕೈಕ ಪ್ರಾಥಮಿಕ ಶಾಲೆ ನಾಲ್ಕನೇ ತರಗತಿಯ ಕಾನ್ವೊಕೇಷನ್ನಿನಲ್ಲಿ ಪರಿಸಮಾಪ್ತಿಯಾಗಿತ್ತು. ಈ ನಿರಾಸಕ್ತಿಯ ಪರಿಣಾಮವಾಗಿಯೆ, ಬೇರೆ-ಬೇರೆ ಊರುಗಳಲ್ಲಿದ್ದ ಬಂಧುಗಳ ಮನೆಯಲ್ಲಿ ನನ್ನನ್ನು ಇರಿಸಿ ಶಾಲೆಗೆ ಸೇರಿಸಬೇಕೆಂಬ ಪ್ರಯತ್ನದ ನನ್ನ ಅಣ್ಣ ಮತ್ತು ಅಪ್ಪ ಇವರ ಶ್ರಮವೆಲ್ಲ ವ್ಯರ್ಥವಾಗುತ್ತಿತ್ತು. ಮಲೆನಾಡಿನ ಮನೆಗಳಲ್ಲಿನ ಒಂದು ಹಸುವನ್ನು ಮಾರಾಟ ಮಾಡಿ ಬೇರೆ ಊರಿಗೆ ಹೊಡೆದುಕೊಂಡು ಹೋದರೆ, ಅನೇಕ ವೇಳೆ ಅವು ಮತ್ತೆ ತಪ್ಪಿಸಿಕೊಂಡು ಮನೆಯ ಕೊಟ್ಟಿಗೆಯಲ್ಲಿ ತನ್ನನ್ನು ಕಟ್ಟುತ್ತಿದ್ದ ಜಾಗಕ್ಕೇ ಹೋಗಿ ನಿಲ್ಲುವ ಹಾಗೆ ನಾನೂ ಮರಳಿ ಬಂದುಬಿಡುತ್ತಿದ್ದೆ. ಇವೆಲ್ಲ ನಿಜವಾದರೂ, ಓದಿನಲ್ಲಿಯೂ ಪರಿಣತನಾಗಬೇಕೆಂದು ಒಂದಿಷ್ಟು ಶ್ರಮ ಹಾಕಿದ್ದು ಹೌದು. ಆದಾಗ್ಯೂ ''ಇವನಿಗೆ ವಿದ್ಯಾಭ್ಯಾಸ ಹೇಳಿಸಿದ್ದಲ್ಲ'' ಎಂಬ, ನನ್ನ ಊರಿನ ಮತ್ತು ಕುಟುಂಬ ವಲಯದವರ ದೃಢ ನಂಬಿಕೆಗೆ ಧಕ್ಕೆ ಬರದಂತೆ ಶಕ್ತಿ ಮೀರಿ ನಡೆದುಕೊಂಡೆ ಎಂಬುದನ್ನು ಹೇಳಲೇಬೇಕು. ಹೀಗಿರುವಾಗ ಒಂದು ದಿನ. ನಮ್ಮೂರ ಬೆಳವಿನಕೊಡಿಗೆ ಸಾಹುಕಾರರ ಮನೆಯಲ್ಲಿ ಯಾವುದೋ ಒಂದು 'ಊಟದ ಮನೆ.'

ಸಮಾರಂಭಕ್ಕೆ ನೆಂಟರಿಷ್ಟರೆಲ್ಲಾ ಸೇರಿದ್ದರು. ಸಾಮಾನ್ಯವಾಗಿ ಇಂತಹ ಸಂದರ್ಭಗಳಲ್ಲಿ ಹಿರಿಯರದೇ ಒಂದು ಗುಂಪಾದರೆ, ತರುಣರದ್ದೇ ಒಂದು ಪಟಾಲಂ. ತಮ್ಮ ರುಚಿಕಟ್ಟಾದ ಮಾತುಗಳಿಂದ ಮನ ಸೆಳೆಯುತ್ತಿದ್ದ ಹೊಸಹಳ್ಳಿ ವೆಂಕಪ್ಪಯ್ಯನವರ ಮಕ್ಕಳು, ತಿಮ್ಮಪ್ಪ, ಕೃಷ್ಣರಾಯ ಕೂಡ ಬಂದಿದ್ದರು. ಸಭೆಯಲ್ಲಿ ಮಾತು ಅದೂ ಇದೂ ವಿಷಯಗಳ ನಡುವೆ ಒಳ್ಳೆಯ ವಿದ್ಯಾರ್ಥಿಯ ಲಕ್ಷಣದ ಕಡೆ ತಿರುಗಿತು. ''ನಡ್ಕೊಂಡು ಹೋಗುತ್ತಿದ್ದಾಗ, ದಾರಿಯಲ್ಲಿ ಪೇಪರಿನ ಚೂರು ಕಂಡರೆ ಅದನ್ನ ತುಳಿದುಕೊಂಡು ಹೋಗುವವನ ತಲೆಗೆ ವಿದ್ಯೆ ಖಂಡಿತ ಹತ್ತಲ್ಲ; ಅದನ್ನ ಕೈಗೆ ತಗಂಡು, ಏನಿದೆ ಅದರಲ್ಲಿ ಅಂತ ಓದೋ ಹುಡುಗನಿಗೆ ವಿದ್ಯೇಲಿ ನಿಜವಾದ ಆಸಕ್ತಿ ಇದೆ ಅಂತ ಅರ್ಥ''. ಇದು ಹೊಸಹಳ್ಳಿ ತಿಮ್ಮಪ್ಪ ಅವರ ಮಾತು. ಈ ಮಾತು ಕೇಳಿ, ಒಮ್ಮೆಗೇ ಮಿಂಚು ಹೊಳೆದಂತಾಗಿ, ಓದಿನ ತಿಜೋರಿಯ ಕೀಲಿ ಕೈಯನ್ನು ವಿದ್ಯಾಧಿದೇವತೆಯೇ ನನಗೆ ಹ್ಯಾಂಡೋವರ್ ಮಾಡಿದಷ್ಟು ಸಂತೋಷವಾಯಿತು. ಆವತ್ತಿನಿಂದ ಯಾವುದೇ ಕಾಗದದ ಚೂರು ಕಣ್ಣಿಗೆ ಬಿದ್ದರೂ, ಅದನ್ನು ಕೈಗೆ ತೆಗೆದುಕೊಂಡು ಪೂರ್ಣ ಓದದೇ ಇದ್ದದ್ದು ಇಲ್ಲವೇ ಇಲ್ಲ. ಆಗೆಲ್ಲಾ ಅಂಗಡಿಯಲ್ಲಿ ಯಾವುದೇ ಸಾಮಾನನ್ನಾದರೂ ನ್ಯೂಸ್ ಪೇಪರಿನಲ್ಲಿಯೇ ಪೊಟ್ಟಣ ಕಟ್ಟಿ

ಕೊಡುತ್ತಿದ್ದರು. ಹಾಗಾಗಿ ಅಪ್ಪ ಕೊಪ್ಪದಿಂದ ತರುತ್ತಿದ್ದ ದಿನಸಿ ಪದಾರ್ಥಗಳ ಪ್ಯಾಕಿನ ಒಂದೊಂದು ಹಾಳೆಯನ್ನೂ ತಪ್ಪದೇ ಓದುತ್ತಿದ್ದೆ.

ಈ ನನ್ನ ಪರಿವರ್ತನೆಯ ಫಲವಾಗಿ ಅನ್ನುವುದಕ್ಕಿಂತ ಹೆಚ್ಚಾಗಿ ಛಲ ಬಿಡದ ತ್ರಿವಿಕ್ರಮನಂತೆ ನಮ್ಮ ಅಣ್ಣ, ಅಪ್ಪ ಇವರ ಹಠ ಯೋಗದ ಪರಿಣಾಮವಾಗಿ ೧೯೬೧–೬೨ರಿಂದ ೧೯೬೪–೬೫ರ ವರೆಗೆ, ಮಾಧ್ಯಮಿಕ ಎಂಟನೇ ತರಗತಿಯಿಂದ ಹೈಸ್ಕೂಲ್ ಮುಗಿಯುವವರೆಗೆ ನಮ್ಮ ಬಂಧುಗಳಾದ ಹಂಚಿನಮನೆ ಶಿಂಗಪ್ಪಯ್ಯ ಮತ್ತು ಸುಬ್ರಹ್ಮಣ್ಯ ಅವರ ಮನೆಯಲ್ಲಿದ್ದುಕೊಂಡು ಶೃಂಗೇರಿಗೆ ಹೋಗಿ ವಿದ್ಯಾಭ್ಯಾಸ ಮುಂದುವರಿಸಿದ್ದಾಯಿತು.

ಬೆಳಗಿನ ಉಪಾಹಾರ, ರಾತ್ರಿ ಊಟ, ವಸತಿ ಇವುಗಳೇನೋ ಯಾವ ಖರ್ಚೂ ಇಲ್ಲದೇ ಹಂಚಿನ ಮನೆಯಲ್ಲಿ ನಡೆದು ಹೋಗುತ್ತಿತ್ತು. ಆದರೆ ಮಧ್ಯಾಹ್ನದ ಊಟ ಮತ್ತು ಶಾಲೆಯ ಶುಲ್ಕ, ಪಠ್ಯಪುಸ್ತಕಗಳಿಗೆ ಮನೆಯಿಂದಲೇ ಹಣ ಹೊಂದಿಸಬೇಕಾಗಿತ್ತು. ಹನ್ನೊಂದು ಜನರಿದ್ದ ನಮ್ಮ ಚಿಕ್ಕ ಕುಟುಂಬವನ್ನು ಒಂದೂವರೆ ಎಕರೆ ಅಡಿಕೆ ತೋಟದಿಂದ ವರ್ಷಕ್ಕೊಮ್ಮೆ ಬರುವ ಖಾತ್ರಿ ಇಲ್ಲದ ಆದಾಯದಲ್ಲಿ ಸಂಬಾಳಿಸುವುದೆಂದರೆ, ಮಲೆನಾಡಿನ ಮಳೆಗಾಲದಲ್ಲಿ ತುಂಬಿಹರಿಯುವ ಹಳ್ಳ ದಾಟಲು ಇದ್ದ ಒಂಟಿ ಅಡಿಕೆ ಮರದ ಕುಂಬು ಸಂಕದ ಮೇಲೆ ಸರ್ಕಸ್ ಮಾಡುತ್ತಾ ಸಾಗಿದಷ್ಟೇ ಸಲೀಸು. ಶೃಂಗೇರಿ ಕಮಲಮ್ಮನ ಮೆಸ್‌ನಲ್ಲಿ ಪ್ರಾರಂಭಕ್ಕೆ ಹತ್ತು ರೂಪಾಯಿ ಪಾವತಿಸಿದರಷ್ಟೇ ಒಂದು ತಿಂಗಳ ಮಧ್ಯಾಹ್ನದ ಊಟದ ಖಾತ್ರಿ. ಇದು ವರ್ಷದ ಆದಾಯವನ್ನು ನೆಚ್ಚಿ ನಡೆಸುವಂಥದ್ದಲ್ಲ. ವೀಳ್ಯದೆಲೆ, ಯಾಲಕ್ಕಿ, ಬಾಳೆಕಾಯಿ, ಕಾಳುಮೆಣಸು ಮುಂತಾದ ತೋಟದ ಉಪಬೆಳೆಗಳ ಮಾರಾಟದಿಂದ ಬಂದ ಚಿಲ್ಲರೆ ಹಣದಿಂದ ಇವೆಲ್ಲ ನಡೆಯಬೇಕು. ಆದರೆ ಅದೇನೂ ಕಟ್ಟಿಟ್ಟ ಬುತ್ತಿಯಲ್ಲ – ನಿರಂತರವಲ್ಲ.

ನಮ್ಮ ಅಮ್ಮ ಶ್ರೀಮಂತ ಕುಟುಂಬದಿಂದ ಬಂದವಳಾದರೂ ಅದರ ಬಗ್ಗೆ ವಿಶೇಷವಾಗಿ ಏನನ್ನೂ ಹೇಳಿಕೊಳ್ಳುತ್ತಿರಲಿಲ್ಲ. ಈಗಿನ ಬಡತನದ ಸಂಕಷ್ಟ ಜೀವನಕ್ಕೆ ಸಹಜವಾಗಿಯೇ ಹೊಂದಿಕೊಂಡು ಬಿಟ್ಟಿದ್ದಳು. ಮದುವೆಯ ಸಮಯದಲ್ಲಿ ಅವಳಿಗೆ ಕೊಟ್ಟ ಚಿನ್ನದ ಆಭರಣಗಳು, ಬೆಳ್ಳಿ ಸಾಮಾನುಗಳು ಬಹಳಷ್ಟು ಸಾರಿ, ಹಣ ಕಾಸಿನ ಮುಗ್ಗಟ್ಟಿನಿಂದ ಪಾರಾಗಲು ಉಪಯೋಗಿಸಲ್ಪಡುತ್ತಿತ್ತು.

ನಾಲ್ಕು ವರ್ಷದ ನನ್ನ ಓದಿನ ಸುದೀರ್ಘ ಸಮಯದಲ್ಲಿ ಕೆಲವೊಮ್ಮೆ ಅಂತಹ ಸನ್ನಿವೇಶ ಅಪರೂಪವೇನೂ ಆಗಿರಲಿಲ್ಲ. ಶಾಲೆಯ ಶುಲ್ಕ, ಮಧ್ಯಾಹ್ನದ ಊಟ ಎರಡಕ್ಕೂ ಹಣ ಅವಶ್ಯವಾಗಿ ಬೇಕಾಗಿತ್ತು. ವಾರದ ರಜೆಗೆ ಮನೆಗೆ ಹೋದಾಗ ಅಪ್ಪ ಕಟ್ಟಿಕೊಡುತ್ತಿದ್ದ ಏಲಕ್ಕಿ, ಮೆಣಸಿನಕಾಳುಗಳ ಜೊತೆಗೆ ಹಲವೊಮ್ಮೆ ಮನೆಯಲ್ಲಿದ್ದ ಬೆಳ್ಳಿ ಲೋಟ ಇತ್ಯಾದಿಗಳನ್ನು ಮಾರಿ ಹಣ ಹೊಂದಿಸಿದ್ದೂ ಉಂಟು.

ಮತ್ತೊಮ್ಮೆ ಅಂತಹುದೇ ಇಕ್ಕಟ್ಟಿನ ಪರಿಸ್ಥಿತಿ ಬಂತು. ಹಣ ಬೇಕೇಬೇಕು. ಆದರೆ ಇಲ್ಲ. ಕಡೆಗೆ ಅಮ್ಮ ಮನೆಯೆಲ್ಲಾ ಶೋಧಿಸಿ ಹಳೇ ಕಾಲುಂಗುರ, ಚಕ್ಕಿಹೋಗಿದ್ದ ಸಂಧ್ಯಾವಂದನೆ ಸೌಟು, ಒಂದಿಷ್ಟು ಬೆಳ್ಳಿ ಚೂರುಗಳು ಇವನ್ನೆಲ್ಲ ಸಂಗ್ರಹಿಸಿ ನನ್ನ ಕೈಗೆ ಕೊಟ್ಟು, ''ಇದನ್ನು ಮಾರಾಟ ಮಾಡಿ ಬಂದ ದುಡ್ಡಲ್ಲಿ ಊಟಕ್ಕೆ, ಸ್ಕೂಲಿಗೆ ಕೊಡು'' ಅಂದಳು.

ಶೃಂಗೇರಿಯಲ್ಲಿ ಸುಬ್ರಹ್ಮಣ್ಯ ಎಂಬ ಚಿನ್ನ ಬೆಳ್ಳಿ ಕೆಲಸ ಮಾಡುವವರು ನಾನಿದ್ದ ಹಂಚಿನಮನೆ ಸುಬ್ರಹ್ಮಣ್ಯ ಅವರ ಆಪ್ತವಲಯದಲ್ಲಿದ್ದವರು. ಅವರ ಬಳಿ ಹೋಗಿ ''ಸ್ಕೂಲ್ ಫೀ ಕಟ್ಟಕ್ಕೆ ಇದನ್ನು ಮಾರಲು ತಂದಿದ್ದೇನೆ'' ಅಂದೆ.

ವಸ್ತುಗಳನ್ನು ನೋಡಿದ ಅವರು, ''ನಾನು ಇದನ್ನೆಲ್ಲಾ ಕೊಂಡುಕೊಳ್ಳಲ್ಲ. ಈ ತರ ಚೂರು-ಪಾರು ಇದ್ರೆ ನಾನಲ್ಲ , ಯಾರೂ ತಗಳ್ಳೋದಿಲ್ಲ. ಇಲ್ಲಿ ಕೊಡು'' ಎಂದು ಹೇಳಿ ಅಷ್ಟೂ ಬೆಳ್ಳಿಯ ಚೂರುಗಳನ್ನು ಸೇರಿಸಿ, ಕುಲುಮೆಯಲ್ಲಿ ಕಾಯಿಸಿ ಚೌಕಾಕಾರದ ಒಂದು ಗಟ್ಟಿ ಮಾಡಿದರು. ಅದನ್ನು ನೀರಲ್ಲಿ ಅದ್ದಿ, ಆರಿಸಿ, ಒಂದು ಪೇಪರಿನ ಚೂರಿನಲ್ಲಿ ಕಟ್ಟಿ ''ಇದನ್ನು ತಗಂಡು ಪದ್ಮರಾಜ ಶೆಟ್ಟರ ಜವಳಿ ಅಂಗಡಿಗೆ ಹೋಗು. ಅವರಿಗೆ ಕೊಡು; ಅವರು ಕೊಂಡುಕೊಳ್ತಾರೆ'' ಅಂದರು.

ನೋಟಕ್ಕೆ ನಿರಾಕರ್ಷಕವಾಗಿದ್ದ ಬೆಳ್ಳಿಯ ಚೂರುಗಳು ಈಗ ಒಂದು ಗೌರವಾನ್ವಿತ ರೂಪ ಪಡೆದಿರುವುದರಿಂದ ಸ್ವಲ್ಪ ಹೆಚ್ಚೇ ಹಣ ಸಿಗಬಹುದು ಅನ್ನಿಸಿತು.

ಪದ್ಮರಾಜ ಶೆಟ್ಟರು, ನಾನು ಯಾರು, ಯಾವ ಕ್ಲಾಸು, ತಂದೆ – ತಾಯಿ ಯಾರು, ಯಾವ ಊರು, ಹಣ ಯಾಕೆ ಬೇಕು ಎಂದು ಅಮೂಲಾಗ್ರವಾಗಿ ವಿಚಾರಿಸಿ, ಬೆಳ್ಳಿಗಟ್ಟಿ ತೂಕಮಾಡಿ ಹಣ ಕೈಯ್ಯಲ್ಲಿಡುತ್ತಾ ಒಂದು ಮಾತು ಹೇಳಿದರು:

''ನೋಡು, ಹಳ್ಳೀಲಿರೋ ಅಪ್ಪ ಅಮ್ಮ ಅವರಿಗೆ ಹೊಟ್ಟೆ ಬಟ್ಟೆಗೆ ಇಲ್ಲದಿದ್ರೂ, ಮಕ್ಕಳು ಓದಿ ಮುಂದೆ ಬರ್ಲಿ ಅಂತ ಏನೆಲ್ಲ ಮಾಡ್ತಾರೆ. ನೀವೂ ಅದಕ್ಕೆ ಸರಿಯಾಗಿ ನಡ್ಕೋಬೇಕು. ಇವತ್ತು ಅವರ ಬೆಳ್ಳಿ ಸಾಮಾನು ಮಾರಿದೀಯ... ಚೆನ್ನಾಗಿ ಓದಿ, ಮುಂದೆ ನೀನೇ ದುಡಿದು ಇದಕ್ಕೆ ಹತ್ತರಷ್ಟು ಅಮ್ಮಗೆ ತೆಗೆಸಿ ಕೊಡಬೇಕು''

ಜೈನ ಸಂಪ್ರದಾಯದ ಶೆಟ್ಟರು ಕೇವಲ ವ್ಯವಹಾರಸ್ಥರಾಗಿ ಮಾತ್ರ ಇರಲಿಲ್ಲ.

ಬೆಳ್ಳಿಗಟ್ಟಿಯನ್ನು ಅಂಗಡಿಗೆ ಕೊಡುವ ಮೊದಲು ಅದನ್ನು ಕಟ್ಟಿದ್ದ ಪೇಪರಿನ ಹಾಳೆಯನ್ನು ಮಡಿಸಿ ಜೇಬಿನಲ್ಲಿ ಇಟ್ಟುಕೊಂಡಿದ್ದೆ. ಯಾಕೆಂದರೆ, ನನ್ನ ಅಭ್ಯಾಸದಂತೆ, ತಕ್ಷಣ ಅದನ್ನು ಓದುವುದು ಸಾಧ್ಯವಾಗಿರಲಿಲ್ಲ. ಶಾಲೆಯ ಆಫೀಸ್ ರೂಮಿನಲ್ಲಿ ಫೀಸ್ ಕಟ್ಟಿಯಾದಮೇಲೆ, ಕ್ಲಾಸಿಗೆ ಹೋಗಿ ಕೂತು ಜೇಬಿನಿಂದ ಪೇಪರ್ ಹಾಳೆ ತೆಗೆದು ಅಕ್ಷರಗಳಮೇಲೆ ಕಣ್ಣಾಡಿಸಿದೆ.

ಅದು ಹಳೇ ಪ್ರಜಾವಾಣಿ ಪತ್ರಿಕೆಯ ಪುಟದ ಕಾಲುಭಾಗ. ಮೈಸೂರು ರಾಮಕೃಷ್ಣಾಶ್ರಮದವರ ಒಂದು ಪ್ರಕಟಣೆ ಕಾಣಿಸಿತು. ವಿವೇಕಾನಂದರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ಪ್ರತಿ ಜಿಲ್ಲೆಯಿಂದ ಆರು ಜನ ವಿದ್ಯಾರ್ಥಿಗಳ ಪ್ರಬಂಧವನ್ನು ಆಯ್ಕೆ ಮಾಡಿ ಅಂತಿಮವಾಗಿ, ಮೈಸೂರಿನಲ್ಲಿ ವಿಜೇತರನ್ನು ಆಯ್ಕೆ ಮಾಡಲಾಗುವುದು. ಮೈಸೂರಿನ ಆಶ್ರಮದ ವಿಳಾಸಕ್ಕೆ ಪತ್ರ ಬರೆದು ಹೆಚ್ಚಿನ ವಿವರ ಹಾಗೂ ನಿಬಂಧನೆಗಳನ್ನು ಪಡೆಯಬಹುದು ಎಂದು ತಿಳಿಸಿದ್ದರು.

ವಿವೇಕಾನಂದರೆಂದರೆ ನಮ್ಮ ಆದರ್ಶ ಪುರುಷ. ಅವರ ಜೀವನ ಚರಿತ್ರೆ ಮತ್ತು ಅವರ ಕೃತಿಗಳನ್ನೋದಿದ ಯಾರೇ ಆದರೂ ವಿದ್ಯಾರ್ಥಿ-ದಿಶೆಯಲ್ಲಿ ಅವರ ಧೀಮಂತ ವ್ಯಕ್ತಿತ್ವಕ್ಕೆ ಮರುಳಾಗದಿರುವುದು ಸಾಧ್ಯವೇ ಇರಲಿಲ್ಲ ಅನ್ನಬೇಕು. ಇನ್ನು ಪ್ರಬಂಧ ರಚನೆಯ ವಿಚಾರ. ಬರವಣಿಗೆ ಆಗಲೂ ನನ್ನ ಹುಚ್ಚು. ಹೈಸ್ಕೂಲ್ ಮೊದಲ ವರ್ಷದಲ್ಲಿಯೇ ನನ್ನ ಮೊದಲ ಕವನ ಸಂಗ್ರಹ ಪ್ರಕಟವಾಗಿತ್ತು. ೧೯೬೨ರ ಭಾರತ-ಚೀನಾ ಯುದ್ಧದ ಸಮಯದಲ್ಲಿ ನಾನು ಬರೆದ ದೇಶಭಕ್ತಿಗೀತೆಗಳು ಬೆಂಗಳೂರು ಆಕಾಶವಾಣಿಯಲ್ಲಿ, ಹಾಡಿನ ರೂಪದಲ್ಲಿ ಅಲ್ಲ-ವಾಚನರೂಪದಲ್ಲಿ ಪ್ರಸಾರವಾಗಿದ್ದವು. ಆಗ ಆಕಾಶವಾಣಿಯಲ್ಲಿದ್ದ ಖ್ಯಾತ ಕಾದಂಬರಿಕಾರ, ಬರಹಗಾರ ಎನ್. ಕೆ. ಕುಲಕರ್ಣಿಯವರು ಅವನ್ನು ವಾಚಿಸಿದ್ದರು.

ಈ ಹಿನ್ನೆಲೆಯಲ್ಲಿ ಸ್ಪರ್ಧೆಯಲ್ಲಿ ಆಗಲೇ ನನಗೆ ಬಹುಮಾನ ಬಂದಂತೆ ಮನಸ್ಸು ಉಲ್ಲಾಸಗೊಂಡಿತು. ಜಾಹೀರಾತಿನ ಮುಂದಿನ ಭಾಗವನ್ನು ಓದಿದೆ. ಉತ್ಸಾಹದ ಜ್ವರ ಜರ್ರನೆ ಇಳಿದು ಹೋಯಿತು. ವಿವರಗಳನ್ನು ತರಿಸಿಕೊಂಡು ಪ್ರಬಂಧ ಸಲ್ಲಿಸುವ ಕೊನೆಯ ದಿನಾಂಕ ಅದಾಗಲೇ ಮುಗಿದುಹೋಗಿತ್ತು.

ದಿಕ್ಕೇ ತೋಚಲಿಲ್ಲ. ಕೈಚೆಲ್ಲಿ ಕುಳಿತುಕೊಳ್ಳುವುದು ಬಿಟ್ಟರೆ ಬೇರೆ ದಾರಿ ಇರಲಿಲ್ಲ. ಮನೆಗೆ ಬಂದವನು ರಾತ್ರಿಯೆಲ್ಲಾ ನಿದ್ದೆಗೆಟ್ಟು ಯೋಚಿಸಿ ಒಂದು ನಿರ್ಧಾರಕ್ಕೆ ಬಂದೆ.

ಮರುದಿನ ರಾಮಕೃಷ್ಣಾಶ್ರಮದ ಅಧ್ಯಕ್ಷರಿಗೆ ಒಂದು ಸುದೀರ್ಘ ಪತ್ರ ಬರೆದೆ. ''ನಾನು ಇರುವ ಸ್ಥಳ ಮಲೆನಾಡಿನ ಒಂದು ಪುಟ್ಟ ಹಳ್ಳಿ. ಮನೆಗೆ ಪೇಪರ್ ಬರುವುದಿಲ್ಲ. ಶಾಲೆಯಲ್ಲಿಯೂ ಪೇಪರ್ ಓದಲು ಸಿಗುವುದಿಲ್ಲ. ನೆನ್ನೆ ಅಂಗಡಿಯಲ್ಲಿ ಹಳೆಯ ಪೇಪರಿನ ಹಾಳೆಯ ಒಂದು ಚೂರು ಸಿಕ್ಕಿದ್ದನ್ನು ಓದಿದಾಗ, ತಾವು ಏರ್ಪಡಿಸಿರುವ ವಿವೇಕಾನಂದರ ಜನ್ಮಶತಾಬ್ದಿ ಪ್ರಬಂಧ ಸ್ಪರ್ಧೆಯ ವಿಚಾರ ತಿಳಿಯಿತು. ಆದರೆ ಕಾಲಾವಧಿ ಮುಗಿದಿದೆ ಎಂದು ತಿಳಿದು ಅತೀವ ದುಃಖವಾಯಿತು... ವಿವೇಕಾನಂದರು ನನ್ನ ಆದರ್ಶ. ರಾಮಕೃಷ್ಣಪರಮಹಂಸರನ್ನು ದೇವರೆಂದೇ ತಿಳಿದವನು ನಾನು. ದಯವಿಟ್ಟು ವಿವರಗಳನ್ನು ಕಳುಹಿಸಿ ನನಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶಮಾಡಿಕೊಡಬೇಕೆಂದು ವಿನಮ್ರನಾಗಿ ಪ್ರಾರ್ಥಿಸುತ್ತೇನೆ'' ಎಂಬ ಅರ್ಥದ ಕಾಗದ ಬರೆದು, ಜೊತೆಗೆ, ಪ್ರಕಟವಾಗಿದ್ದ ನನ್ನ ಕವನ ಸಂಕಲನದ ಒಂದು ಪ್ರತಿಯನ್ನೂ ಇಟ್ಟು ಪೋಸ್ಟ್ ಮಾಡಿದೆ. ಮತ್ತೆ ನಾಲ್ಕೇ ದಿನಕ್ಕೆ ಅಂಚೆಯಲ್ಲಿ ರಾಮಕೃಷ್ಣಾಶ್ರಮದಿಂದ ಒಂದು ಕವರ್ ಬಂತು. ಪ್ರಬಂಧ ಸ್ಪರ್ಧೆಯ ವಿವರಗಳನ್ನು ಸೊಗಸಾಗಿ ಮುದ್ರಿಸಿದ್ದ ನಾಲ್ಕು ಪುಟಗಳು. ಕೊನೆಗೆ, 'ನೀನು ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂಬುದೇ ನಮ್ಮ ಇಚ್ಛೆ' ಎಂದು ಬರೆದು ಸಹಿ ಮಾಡಿದ್ದೂ ಇತ್ತು.

ನಿಯಮದಂತೆ ಮೊದಲು ಶಾಲೆಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳೂ ಪ್ರಬಂಧ ಬರೆದು ಸಲ್ಲಿಸಬೇಕು. ಅವುಗಳಲ್ಲಿ ಅತ್ಯುತ್ತಮವೆಂದು ಆಯ್ಕೆಯಾದ ಒಂದು ಪ್ರಬಂಧವನ್ನು ಮುಖ್ಯೋಪಾಧ್ಯಾಯರು ಸಹಿಮಾಡಿ ಆಶ್ರಮಕ್ಕೆ ಕಳುಹಿಸಬೇಕು. ಹಾಗೆ ಆಯ್ಕೆಯಾಗಿ ಒಂದು ಜಿಲ್ಲೆಯಿಂದ ಬಂದ ಪ್ರವೇಶಗಳಲ್ಲಿ ಆರು ಪ್ರಬಂಧಗಳನ್ನು ಆಯ್ಕೆ ಮಾಡಲಾಗುವುದು. ಅದನ್ನು ಬರೆದ ವಿದ್ಯಾರ್ಥಿಗಳನ್ನು ಮೈಸೂರಿಗೆ ಕರೆಸಿಕೊಳ್ಳಲಾಗುವುದು. ಬಂದು - ಹೋಗುವ ಪ್ರಯಾಣ ವೆಚ್ಚ, ಮೈಸೂರಿನಲ್ಲಿ ಊಟ ತಿಂಡಿ, ವಸತಿ ಇವನ್ನೆಲ್ಲಾ ಆಶ್ರಮವೇ ನೋಡಿಕೊಳ್ಳುವುದು. ಮೂರು ದಿನಗಳಲ್ಲಿ ಮೈಸೂರು ಮತ್ತು ಸುತ್ತ-ಮುತ್ತಲಿನ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದೊಯ್ಯಲಾಗುವುದು.

ಬಂದ ಪ್ರಬಂಧಗಳಲ್ಲಿ, ಮುಂದಿನ ಸುತ್ತಿನಲ್ಲಿ, ಪ್ರತಿ ಜಿಲ್ಲೆಗೆ ಒಂದು ಪ್ರಥಮ ಒಂದು ದ್ವಿತೀಯ ಬಹುಮಾನ ನೀಡಲಾಗುವುದು. ಅಂತಿಮ ಸುತ್ತಿನಲ್ಲಿ ಪ್ರತಿ ಜಿಲ್ಲೆಯಲ್ಲಿ ವಿಜೇತರಾದವರ ಎಲ್ಲ ಪ್ರಬಂಧಗಳನ್ನು ಪರಿಶೀಲಿಸಿ ಒಂದು ಪ್ರಥಮ, ಒಂದು ದ್ವಿತೀಯ ಬಹುಮಾನ ನೀಡಲಾಗುವುದು. ಪ್ರಥಮ ಬಹುಮಾನವಾಗಿ ವಿದ್ಯಾರ್ಥಿಗೆ ಟೀಕ್‌ವುಡ್‌ನಲ್ಲಿ ಕಟ್ಟುಹಾಕಿದ ವಿವೇಕಾನಂದರ ಬೃಹತ್ ಫೋಟೋ, ಅವರ ಸಮಗ್ರ ಬರಹಗಳನ್ನೊಳಗೊಂಡ 'ವಿವೇಕಾನಂದ ಕೃತಿಶ್ರೇಣಿ'ಯ ಹದಿನೈದು ಸಂಪುಟಗಳು ಮತ್ತು ಆ ವಿದ್ಯಾರ್ಥಿಯ ಶಾಲಾ ಮುಖ್ಯೋಪಾಧ್ಯಾಯರಿಗೆ ವಿವೇಕಾನಂದರ ಹತ್ತು ಕೃತಿಗಳು, ಟೀಕ್‌ವುಡ್‌ನಲ್ಲಿ ಕಟ್ಟುಹಾಕಿದ ವಿವೇಕಾನಂದರ ಫೋಟೊ ಇವುಗಳನ್ನು ನೀಡಲಾಗುವುದು.

ವಿವರವನ್ನು ಓದಿ ನನಗೆ 'ಸ್ವರ್ಗಕ್ಕೆ ಮೂರೇ ಗೇಣು' ಅನ್ನುವಂತಾಯಿತು. ಅವತ್ತೇ ಕೂತು, ಇದ್ದ ಪಾಂಡಿತ್ಯವನ್ನೆಲ್ಲಾ ಉಪಯೋಗಿಸಿ ಎಂಟು ಪುಟಗಳ ಪ್ರಬಂಧ ರಚಿಸಿದೆ. ಆದರೆ ನಿಯಮದ ಪ್ರಕಾರ ಶಾಲೆಯಲ್ಲಿರುವ ಎಲ್ಲಾ ಆಸಕ್ತ ವಿದ್ಯಾರ್ಥಿಗಳೂ ಭಾಗವಹಿಸಿ, ಅದರಲ್ಲಿ ಒಂದನ್ನು ಆಯ್ಕೆ ಮಾಡಬೇಕಾಗಿತ್ತು. ಮುಖ್ಯೋಪಾಧ್ಯಾಯರಿಗೆ ಪ್ರಬಂಧ ಸಲ್ಲಿಸಿ ವಿಷಯ ತಿಳಿಸಿದೆ.

*(ಮುಂದಿನ ಸಂಚಿಕೆಗೆ)*